ಇಂಗ್ಲಿಷ್ ಮೂಲ: ರೋಆಲ್ಡ್ ದಾಹ್ಲ್
ಕನ್ನಡಕ್ಕೆ: ಜೆ.ವಿ. ಕಾರ್ಲೊ

ಕಲೆ: ವೆಂಕಟ್ರಮಣ ಭಟ್

# ನಲ್ಮೆಯ ಮುದುಕಿ

ಬಿಲ್ಲಿ ವೀವರ್ ಬಾತ್ ರೈಲ್ವೇ ಸ್ಟೇಶನಲ್ಲಿ ಇಳಿದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಅವನು ಸ್ಟೇಶನಿನ ಮುಖ್ಯದ್ವಾರದಿಂದ ಹೊರಗೆ ಬಂದ. ನಕ್ಷತ್ರಗಳು ಮಿನುಗುತ್ತಿದ್ದ ಆಗಸದಲ್ಲಿ ಮುಕುಟವಿಟ್ಟಂತೆ ಚಂದ್ರ ಸಕಲ ವೈಭವದಿಂದ ಮೇಲೇರುತ್ತಿದ್ದ. ಅವನು ಮಧ್ಯಾಹ್ನದ ರೈಲಲ್ಲೇ ಲಂಡನ್ನಿನಿಂದ ಹೊರಟಿದ್ದ. ಮಧ್ಯೆ, ಅವನು ಸ್ವಿಂಡನ್ ಸ್ಟೇಶನಿನಲ್ಲಿ ಇಳಿದು ರೈಲು ಬದಲಾಯಿಸಿಕೊಂಡಿದ್ದ. ಹೊರಗೆ ಚಳಿ ಇತ್ತು. ತನ್ನಷ್ಟಕ್ಕೇ ಅವನ ಅಂಗೈಗಳು ಕೆನ್ನೆಗಳನ್ನು ಸವರತೊಡಗಿದವು.

"ಎಕ್ಸ್‌ಕ್ಯೂಸ್ ಮಿ!" ಅವನು ಕೂಲಿಯವನನ್ನು ಕರೆದ. "ಇಂದಿನ ರಾತ್ರಿ ಕಳೆಯಲು ಇಲ್ಲೇಲ್ಲಾದರೂ ಅಗ್ಗದ ಹೋಟೆಲ್ ರೂಮು ಸಿಗಬಹುದೆ?" ಅವನು ಕೇಳಿದ.

"ಹೀಗೇ ಕಾಲು ಮೈಲಿ ಮುಂದಕ್ಕೆ ನಡೆದುಕೊಂಡು ಹೋದರೆ 'ಬೆಲ್ಸ್ ಅಂಡ್ ಡ್ರ್ಯಾಗನ್' ಅಂತ ಹೋಟೆಲ್ ಸಿಗುತ್ತದೆ." ಕೂಲಿಯವನು ಹೇಳಿದ.

ಅವನನ್ನು ವಂದಿಸಿ ಬಿಲ್ಲಿ ವೀವರ್ ಸೂಟ್‌ಕೇಸನ್ನು ಎತ್ತಿಕೊಂಡು ಮುಂದೆ ನಡೆದ. ಅವನು ಇದೇ ಮೊದಲ ಬಾರಿಗೆ ಬಾತ್ ನಗರಕ್ಕೆ ಬಂದಿದ್ದು. ಇಲ್ಲಿ ಯಾರೂ ಪರಿಚಯವಿರಲಿಲ್ಲ. ಅವನಿಗೆ ಇಲ್ಲಿಗೆ ವರ್ಗಾಯಿಸಲಾಗಿತ್ತು. ಅವನ ಮೇಲಧಿಕಾರಿ, "ಉಳಿದುಕೊಳ್ಳುವುದಕ್ಕೆ ನೀನೇ ವ್ಯವಸ್ಥೆ ಮಾಡಿಕೊಂಡು ಬ್ರ್ಯಾಂಚ್ ಆಫೀಸರನ್ನು ಕಾಣು." ಎಂದಿದ್ದ.

ಬಿಲ್ಲಿ ವೀವರನಿಗೆ ಹದಿನೇಳು ವರ್ಷ ವಯಸ್ಸಾಗಿತ್ತು. ಅವನು ಮೇಲೆ ತೊಟ್ಟಿದ್ದ ನೀಲಿ ವರ್ಣದ ಓವರ್‌ಕೋಟಿನ ಕೆಳಗೆ ಕಂದು ಬಣ್ಣದ ಸೂಟು ಧರಿಸಿದ್ದ. ಅದೇ ಬಣ್ಣದ ಹ್ಯಾಟು. ಆ ವಯಸ್ಸಿನ ಹುಡುಗರಲ್ಲಿರುವ ಚುರುಕುತನ ಅವನಲ್ಲಿ ಕಾಣಬಹುದಿತ್ತು. ಅಲ್ಲದೆ, ಅವನು ಲಂಡನಿನಲ್ಲಿ ನೋಡಿದ್ದ ಯಶಸ್ವಿ ಉದ್ಯಮಿಗಳಲ್ಲಿ ಒಂದು ವಿಶಿಷ್ಟ ಸ್ವಭಾವವನ್ನು ಗಮನಿಸಿದ್ದ. ಅವರ ಚುರುಕುತನ ಅವನನ್ನು ಬಹಳವಾಗಿ ಆಕರ್ಷಿಸಿತ್ತು.

ಅವನು ನಡೆದು ಹೋಗುತ್ತಿದ್ದ ಆ ವಿಶಾಲವಾದ ರಸ್ತೆಯ ಇಕ್ಕೆಲಗಳಲ್ಲೂ ಒಂದೇ ನಮೂನೆಯ ಮನೆಗಳು ಕಾಣುತ್ತಿದ್ದದ್ದು ಬಿಟ್ಟರೆ ಅಂಗಡಿಗಳೊಂದೂ ಕಾಣಲಿಲ್ಲ. ಎಲ್ಲಾ ಮನೆಗಳಿಗೂ ಕಡ್ಡಾಯವೆಂಬಂತೆ ಎರಡು ಕಂಬಗಳ ಪಡಸಾಲೆಗಳು, ಹತ್ತಲು ನಾಲ್ಕೈದು ಮೆಟ್ಟಿಲುಗಳು. ಒಂದು ಕಾಲದಲ್ಲಿ ಶ್ರೀಮಂತಿಕೆಯಿಂದ ಮೆರೆದಿದ್ದ ಮನೆಗಳು ಈಗ ನೋಡಿಕೊಳ್ಳುವವರು ದಿಕ್ಕಿಲ್ಲದೆ ಸಾಲಾಗಿ ಪಾಳು ಬಿದ್ದಿರುವಂತೆ ಕಾಣಿಸುತ್ತಿದ್ದವು.

ಒಮ್ಮೆಲೆ, ರಸ್ತೆದೀಪದ ಬೆಳಕಿಗೆ ಅವನ ಬಲಬದಿಯಲ್ಲಿನ ಒಂದು ಮನೆಯ ಕಿಟಕಿಯ ಮೇಲೆ